Government of Karnataka

Deposition Sheet Form No. R.P. 57

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಲಿಂಗಸಗೂರ

ಸಿ.ಸಿ ನಂಬರ 714/2023

ಸಿ ಡಬ್ಲ್ಯೂ-4
ಪಿ ಡಬ್ಲ್ಯೂ-2

| | | |
|---|---|---|
| ಸಾಕ್ಷಿದಾರರ ಹೆಸರು | ಃ- | ವೆಂಕಟೇಶ |
| ತಂದೆಯ ಹೆಸರು | ಃ- | ಸೋಮಲೆಪ್ಪ |
| ವಯಸ್ಸು | ಃ- | 28 ವರ್ಷ |
| ಉದ್ಯೋಗ | ಃ- | ಒಕ್ಕಲುತನ |
| ವಾಸಸ್ಥಳ | ಃ- | ಹಾಲಭಾವಿ ತಾಂಡ |

ದಿ.16-07-2026 **ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.**

***ಮುಖ್ಯ ವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ.***

ಚಾ.ಸಾ-1 ನನ್ನ ಅಕ್ಕ. ಚಾ.ಸಾ-2 ಮತ್ತು 3 ನಮ್ಮೂರಿನವರು ಪರಿಚಯ ಇದೆ. ಚಾ.ಸಾ-5 ನನ್ನ ತಮ್ಮ. ಚಾ.ಸಾ-6 ನನ್ನ ಅಕ್ಕನ ಮಗಳು. ಚಾ.ಸಾ-7 ನನ್ನ ಚಿಕ್ಕಪ್ಪ. ಚಾ.ಸಾ-8 ನನ್ನ ತಾಯಿ. 1ನೇ ಆರೋಪಿ ನನ್ನ ಮಾವ. 2ನೇ ಆರೋಪಿ ಮೃತಪಟ್ಟಿರುತ್ತಾನೆ. 3ನೇ ಆರೋಪಿ ನನ್ನ ಮಾವ. 4 ರಿಂದ 11 ನೇ ಆರೋಪಿತರು ನಮ್ಮ ಸಂಬಂಧಿಕರು.

ಸುಮಾರು 3 ವರ್ಷಗಳ ಹಿಂದೆ ಬೆಳಿಗ್ಗೆ 8-00 ಗಂಟೆಗೆ ನಾನು ಚಾ.ಸಾ-1 ರವರ ಮನೆಯ ಮುಂದೆ ಇರುವಾಗ ಚಾ.ಸಾ-1 ರವರು ತನ್ನ ಗಂಡನಿಗೆ ಬರಬೇಕಾದ ಆಸ್ತಿಯನ್ನು ಕೊಡಬೇಕು ಎಂದು ಹಿರಿಯರಿಗೆ ಕರೆಯಬೇಕು ಎಂದು ಅವರ ಮನೆಯ ಮುಂದೆ ಇದ್ದಾಗ ಎಲ್ಲಾ ಆರೋಪಿತರು ಗುಂಪು ಕಟ್ಟಿಕೊಂಡು ಬಂದು ಚಾ.ಸಾ-1 ರವರಿಗೆ ಬೋಸೂಡಿ, ಸೂಳೆ ಎಂದು ಅವಾಚ್ಯವಾಗಿ ಬೈದಿರುತ್ತಾರೆ. ನಂತರ ಚಾ.ಸಾ-1 ರವರಿಗೆ ಲೇ ನಿನಗೆ ಬಾಗ ಕೊಡುವದಿಲ್ಲ ಎಲ್ಲಿಗೆ ಹೋಗುತ್ತಿಯಾ ಹೋಗು ಎಂದು 1ನೇ ಆರೋಪಿ ಬೈದು ಕಬ್ಬಿಣದ ರಾಡಿನಿಂದ ಹೊಡೆದಿರುತ್ತಾನೆ. ನಂತರ ಲಕ್ಷ್ಮೀಬಾಯಿ, ರೇಣುಕಾ ಮತ್ತು ರೇಣುಕಾಬಾಯಿ ರವರು ಬಂದು ಚಾ.ಸಾ-1 ರವರ ಕೂದಲು ಹಿಡಿದು ಎಳೆದಾಡಿ ಕೈಗಳಿಂದ ಹೊಡೆದಿರುತ್ತಾರೆ. ಆಗ ನಾನು ಮತ್ತು ಚಾ.ಸಾ-5 ರವರು ಜಗಳ ಬಿಡಿಸಲು ಹೋದಾಗ 1ನೇ ಆರೋಪಿ ಚಾ.ಸಾ-5 ರವರಿಗೆ ಕೈ ಮುಷ್ಟಿ ಮಾಡಿ ಹೊಡೆದಿರುತ್ತಾನೆ. ಅದೇ ರೀತಿ ನನಗೆ 1ನೇ ಆರೋಪಿ ಕಟ್ಟಿಗೆಯಿಂದ ಹೊಡೆದಿರುತ್ತಾನೆ. ಚಾ.ಸಾ-6 ರವರು ಜಗಳ ಬಿಡಿಸಿರುತ್ತಾರೆ. ನಂತರ ಚಾ.ಸಾ-6

ರವರಿಗೆ ಆರೋಪಿತರು ಕೈಯಿಂದ ಹೊಡೆದಿರುತ್ತಾರೆ. ಚಾ.ಸಾ-7 ಮತ್ತು 8 ರವರು ಬಂದು ಜಗಳ ಬಿಡಿಸಿರುತ್ತಾರೆ. ಕಟ್ಟಿಗೆ ಮತ್ತು ಕಬ್ಬಿಣದ ರಾಡನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಮುದ್ದೇಮಾಲು-1 ಮತ್ತು 2 ಎಂದು ಗುರುತಿಸಲಾಗಿದೆ.

**(ಮಾನ್ಯ ಎಪಿಪಿ ಅವರು ಸಾಕ್ಷಿಯನ್ನು ಭಾಗಶ: ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿ ಸವಾಲಿಗೆ ಅನುಮತಿ ಕೇಳಿರುತ್ತಾರೆ. ಅನುಮತಿ ನೀಡಲಾಯಿತು.)**

**ಪಾಟೀ ಸವಾಲು: ಎಪಿಪಿ ಅವರಿಂದ:-**

ದಿನಾಂಕ 11-06-2023 ರಂದು ಚಾ.ಸಾ-1 ರವರಿಗೆ 1ನೆ ಆರೋಪಿ ಸೀರೆ ಹಿಡಿದು ಎಳೆದಾಡಿ ಮಾನ ಹಾನಿ ಮಾಡಿರುತ್ತಾನೆ ಎಂದರೆ ಸರಿ. ನಂತರ 2, 3, 5, 6 ಮತ್ತು 11ನೇ ಆರೋಪಿತರು ಚಾ.ಸಾ-1 ರವರಿಗೆ ಕೈಗಳಿಂದ ಹೊಡೆದಿರುತ್ತಾರೆ ಎಂದರೆ ಸರಿ. ನಂತರ ಎಲ್ಲಾ ಆರೋಪಿತರು ಆಸ್ತಿ ಕೇಳಿದರೆ ನಿಮ್ಮನ್ನು ಜೀವ ಸಹಿತ ಬಿಡುವದಿಲ್ಲ ಎಂದು ಜೀವ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲು ಶ್ರೀ ಎಸ್.ಆರ್.ಆರ್ ವಕೀಲರಿಂದ : -**

ಚಾ.ಸಾ-1 ನನ್ನ ಅಕ್ಕ. ನಮ್ಮ ಅಕ್ಕನ ಗಂಡ 1ನೆ ಆರೋಪಿಯ ತಮ್ಮನಾಗಿದ್ದು ಆತನು ಮದುವೆಯಾಗುವದಕ್ಕಿಂತ ಮುಂಚೆ ಬೇರೆಯಾಗಿದ್ದ ಎಂದರೆ ಸರಿಯಲ್ಲ. 1ನೇ ಆರೋಪಿತನು ಅವರು ಬೇರೆಯಾದ ನಂತರ 4 ಎಕರೆ ಜಮೀನನ್ನು ತನ್ನ ತಾಯಿಯ ಹೆಸರಿನಲ್ಲಿ ಖರೀದಿ ಮಾಡಿದ್ದ ಎಂದರೆ ಸರಿಯಲ್ಲ. ಚಾ.ಸಾ-1 ರವರು ಜಮೀನಿನಲ್ಲಿ ಬಾಗ ಬೇಕು ಎಂದು ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ಕೇಸು ಹಾಕಿರುತ್ತಾಳೆ ಎಂದರೆ ಸರಿ. ಆ ಆಸ್ತಿಯಲ್ಲಿ ನಮ್ಮ ಅಕ್ಕನಿಗೆ ಯಾವುದೇ ಬರದಿದ್ದರೂ ಸಹ ಆರೋಪಿತರ ಜೊತೆ ಜಗಳ ಮಾಡಿರುತ್ತಾಳೆ ಎಂದರೆ ಸರಿಯಲ್ಲ. ಈಗಾಗಲೇ ನಮ್ಮ ಅಕ್ಕನಿಗೆ 2 ಎಕರೆ ಜಮೀನು ಕೊಟ್ಟಿದ್ದು ಅದನ್ನು ಉಳುಮೆ ಮಾಡುತ್ತಿದ್ದಾಳೆ ಎಂದರೆ ಸರಿಯಲ್ಲ. ಆ ದ್ವೇಷದಿಂದ ಚಾ.ಸಾ-1 ರವರು ಆರೋಪಿತರ ವಿರುದ್ದ ಸುಳ್ಳು ಕೇಸು ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರು ನನಗೆ, ಚಾ.ಸಾ-1 ಮತ್ತು 5 ರವರಿಗೆ ಹೊಡೆಬಡೆ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪೋಲಿಸರ ಮುಂದೆ ಹೇಳಿಕೆಯಲ್ಲಿ ಈ ವಿಷಯಗಳನ್ನು ಹೇಳಿರುತ್ತೇನೆ. ಆರೋಪಿತರು ಯಾವುದೇ ಕಟ್ಟಿಗೆಯಿಂದ, ಕಬ್ಬಿಣದ ರಾಡಿನಿಂದ ಹಲ್ಲೆ ಮಾಡಿಲ್ಲ ಅವಾಚ್ಯವಾಗಿ ಬೈದಿಲ್ಲ ಜೀವ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ. ಚಾ.ಸಾ-1

ರವರು ನಮ್ಮ ಅಕ್ಕ ಆಗಿದ್ದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ..
ಲಿಂಗಸಗೂರು.